ಸಂಬುವಂತೆ ಅಧಿಕಾರವನ್ನು ನೀಡಲಾಗಿದೆ, ಹಾಗೆ ಸಿಬ್ಬಂದಿ ವರ್ಗವನ್ನು ಹೊಂದಿರುವ ಯಾವುದಾದರೂ ನಿರ್ದಿಷ್ಟ ನಾಡ ಕಛೇರಿಗಳನ್ನು ಸರ್ಕಾರದ ಗಮನಕ್ಕೆ ತಂದಲ್ಲಿ ಸೂಕ್ತ ವವಸ್ಥೆ ಮಾಡ ಲಾಗುವುದು.

ಮಾನ್ಯ ಸದಸ್ಯರು ಪ್ರತ್ಯಾಯೋಜಿಸಬೇಕೆಂದು ತಿಳಿಸಿರುವ ಕೆಲವೊಂದು ಅಧಿಕಾರಗಳನ್ನು ಈಗಾಗಲೇ ಪ್ರತ್ಯಾಯೋಜಿಸಲಾಗಿದೆ. ಸರ್ಕಾರವು ಸಹ ಈಗಾಗಲೇ ಪ್ರತ್ಯಾಯೋಜಿಸುವ ಅಧಿಕಾರಗಳು ಪೂರ್ಣ ಮಟ್ಟದ್ದಲ್ಲವೆಂದು ಗಮನಿಸಿರುವ ಕಾರಣ, ಮತ್ತಷ್ಟು ಅಧಿಕಾರಗಳನ್ನು ಪ್ರತ್ಯಾಯೋಜಿಸುವ ಬಗ್ಗೆ ಪರಿಶೀಲಿಸುತ್ತದೆ,

೮. ಭದ್ರಾವತಿಯ ಮೈಸೂರು ಕಾಗದದ ಕಾರ್ಖಾನೆಯ ನೌಕರರ ಸಂಘಕ್ಕೂ ಕಾರ್ಮಿಕರ ಸಂಘಕ್ಕೆ ಘರ್ಷಣೆಯಾಗಿರುವುದು

ಶ್ರೀ ಡಿ. ಜಿ ಬಸವನಗೌಡ.—ಭದ್ರಾವತಿಯಲ್ಲಿ ಮೈಸೂರು ಕಾಗದ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿರುವ ನೌಕರರ ಸಂಘಕ್ಕೂ ಮತ್ತು ಕಾರ್ಮಿಕರ ಸಂಘಕ್ಕೂ ಘರ್ಷಣೆಯುಂಟಾಗಿ ಕಾರ್ಖಾನೆಯ ಕೆಲಸ ಕಾರ್ಯಗಳು ಸ್ಥಗಿತವಾಗಿದ್ದು ಉತ್ಪಾದನೆಗೆ ಧಕ್ಕೆಯಾಗಿದೆಯೆಂಬ ಶಂಖೆ ಸಾರ್ವಜನಿಕರಲ್ಲಿ ಮಾಡಿದ್ದು, ಪರಿಸ್ಥಿತಿ ಅಡಳಿತ ವರ್ಗದ ಹತೋಟಿಗೂ ಬಾರದೆ ವಿಕೋಪಕ್ಕೆ ಹೋಗಿದ್ದು, ಇಡೀ ಆವರಣ ಅಶಾಂತಿಯ ವಾತಾವರಣದಲ್ಲಿರುಲ್ಲಿ ಪ್ರಯುಕ್ತ ಸರ್ಕಾರ ಕೂಡಲೇ ಮಧ್ಯ ಪ್ರವೇಶಿಸಿ, ಪರಿಸ್ಥಿತಿಯನ್ನು ಹತೋಟಿಗೆ ತರುವ ಪ್ರಯತ್ನಪಡುವುದಲ್ಲದೆ, ತಪ್ಪಿತಸ್ಥ ಅಧಿಕಾರಿಗಳ ಮೇಲೆ ಸೂಕ್ತ ಕ್ರಮ ಕೈಗೊಳ್ಳಲು ಮಾನ್ಯ ಅಧ್ಯಕ್ಷರ ಮೂಲಕ ಕೈಗಾರಿಕಾ ಸಚಿವರ ಗಮನವನ್ನು ಸೆಳೆಯ ಬಯಸುತ್ತೇನೆ.

ಶ್ರೀ ಜೆ. ಹೆಚ್. ಪಟೇಲ್ (ಕೈಗಾರಿಕಾ ಸಚಿವರು).—ಮಾನ್ಯ ಸದಸ್ಯರು ಈ ಬಗ್ಗೆ ಏನು ಅನು ಮಾನ ವ್ಯಕ್ತಪಡಿಸಿದ್ದಾರೆ ಆ ಪ್ರದೇಶದಲ್ಲಿ ಅಶಾಂತಿ ವಾತಾವರಣ ಅಲ್ಲದೆ ಅಲ್ಲಿ ಆ ಪರಿಸ್ಥಿತಿ ಇಲ್ಲ ಎಂದು ಹೇಳುತ್ತೇನೆ. ಅಲ್ಲಿ ನೌಕರರ ಸಂಘ ಮತ್ತು ಆಫೀಸರ್ಸ್ ಅಸೋಸಿಯೇಷನ್ ಎಂದು ಏನು ಇವೆ ಅವರು ಕೆಲವೊಂದು ಬೇಡಿಕೆಗಳನ್ನು ಮ್ಯಾನೇಜ್‌ಮೆಂಟ್ ಎದುರಿಗೆ ಇಟ್ಟರು. ಆದರೆ ಅಲ್ಲಿರುವ ಆಫೀಸರ್ಸ್ ಅಸೋಸಿಯೇಷನ್ ಕಾರ್ಮಿಕರ ಹಾಗೆ ಟ್ರೇಡ್ ಯೂನಿಯನ್ ರೈಟ್ಸ್ ತರಹ ಇಲ್ಲ. ಅವರ ಬೇಡಿಕೆಗಳ ವಿವರಗಳಿಗೆ ನಾನು ಹೋಗುವುದಿಲ್ಲ. ಅಲ್ಲಿ ಆಡಳಿತ ವರ್ಗ ಏನು ಇದೆ ಈ ಬಗ್ಗೆ ಅವರೊಡನೆ ಸಾಕಷ್ಟು ಸಭ್ಯ ರೀತಿಯಲ್ಲಿ ಅವರು ವರ್ತಿಸಿಕೊಂಡು ಬಂದಿರುವುದು ಬಗ್ಗೆ ಅಲ್ಲಿರುವ ಆಫೀಸರ್ ಅಸೋಸಿಯೇಷನ್‌ನವರು ತಪ್ಪು ತಿಳಿದುಕೊಂಡಿದ್ದಾರೆ. ಅವರು ೨೬-೨-೮೭ ಮತ್ತು ೨೭-೨-೮೭ ಈ ಎರಡು ದಿನವೂ ಮಾಸ್ ಲೀವ್ ಹಾಗಿ ಪ್ರೊಟೆಸ್ಟ್ ಮಾಡಿದ್ದರೂ ಕೂಡ ಕಾರ್ಮಿಕರು, ಟೇಬರ್ ಯೂನಿಯನ್ನ್‌ನವರು ಅವರ ಮಾತನ್ನು ಕೇಳಲಿಲ್ಲ. ಏಕಕ್ಕೆಂದರೆ ಅವರು ಸಾವಿರಾರು ಸಂಖ್ಯೆಯಲ್ಲಿ ಇದ್ದಾರೆ. ಇವರು ೩೦೦ ಜನ ಇದ್ದಾರೆ. ಇವರು ಆ ಕಾರ್ಖಾನೆಯ ಉತ್ಪಾದನೆಯನ್ನು ಕೆಡಿಸುವುದಕ್ಕೆ ಪ್ರಯತ್ನ ಮಾಡಿದರೂ ಕೂಡ ಆ ಕಾರ್ಮಿಕರು ಅವರ ಮಾತು ಕೇಳದೆ ಚೆನ್ನಾಗಿ ಕೆಲಸ ಮಾಡಿದ್ದಾರೆ. ಆದಕ್ಕಾಗಿ ನಾನು ಸರ್ಕಾರದ ಪರವಾಗಿ ಕಾರ್ಮಿಕರನ್ನು ಅಭಿನಂದಿಸುತ್ತೇನೆ ಜೊತೆಗೆ ಆಫೀಸರ್ಸ್‌ಗೆ ಇದು ತಕ್ಕುದಲ್ಲ. ಅವರ ಡಿಮ್ಯಾಂಡ್ಸ್ ಸರಿಯೋ ತಪ್ಪೊ ಆ ಬಗ್ಗೆ ಅವರು ಕೆಲವನ್ನು ಒಪ್ಪಬಹುದು ಅಥವಾ ಬಿಡಬಹುದು ಯಾವುದನ್ನು ಚರ್ಚೆ ಮೂಲಕ ಮಾಡಬೇಕೋ ಅದನ್ನು ಮಾಡಬೇಕಾಗುತ್ತದೆ, ಅದು ಬಿಟ್ಟು ಅವರು ಬೇರೆ ರೀತಿಯಲ್ಲಿ ಈ ರೀತಿಯಾದ ಮಾರ್ಗವನ್ನು ಮಾಡುವುದಾದರೆ ಅವರ ಮೇಲೆ ಶಿಸ್ತಿನ ಕ್ರಮವನ್ನು ತೆಗೆದುಕೊಳ್ಳಬೇಕಾಗುತ್ತದೆ. ಎನ್ನುವುದನ್ನು ತಿಳಿಸುತ್ತೇನೆ. ನನಗೆ ಬಂದಿರುವ ವರ್ತಮಾನದ ಪ್ರಕಾರ ಅಲ್ಲಿ ವಾತಾವರಣವನ್ನು ಕೆಡಿಸುವ ಕೆಲವೇ ಜನರು ಇದ್ದು ಅವರ ಪ್ರಚೋದನೆಯಿಂದ ಇಂತಹ ಒಂದು ಪರಿಸ್ಥಿತಿ ಆಯಿತು. ಈಗ ಅಲ್ಲಿ ಪರಿಸ್ಥಿತಿ ಒಂದು ಹತೋಟಿಗೆ ಬರುತ್ತಾ ಇದೆ. ನಾನೂ ಮಾನ್ಯ ಸದಸ್ಯರಲ್ಲಿ ಮನವಿ ಮಾಡಿ ಕೊಳ್ಳುತ್ತೇನೆ. ಅವರು ಅಲ್ಲಿ ಕಾರ್ಖಾನೆಯನ್ನು ಕೆಡಿಸುವ ಪ್ರಸಂಗ ಬರುತ್ತದೆ ಎಂದು ಏನು ಒಂದು ಶಂಕೆಯನ್ನು, ಅನುಮಾನವನ್ನು ಇಟ್ಟು ಕೊಂಡಿದ್ದಾರೋ ಆ ಪ್ರಸಂಗ ಮತ್ತೆ ಬರುವುದಿಲ್ಲ. ಎಂದು ನಾನು ಹೇಳುತ್ತೇನೆ.